| | | |
|---|---|---|
| (ಇ) | ಗಣಿ ಪ್ರದೇಶದ ಸುತ್ತಮುತ್ತಲ ಪರಿಸರ ಮಾಲಿನ್ಯ ತಡೆಗಟ್ಟಲು ಮತ್ತು ಅಲ್ಲಿನ ಕಾರ್ಮಿಕರ ಆರೋಗ್ಯ ರಕ್ಷಣೆಗಾಗಿ ಗಣಿ ಕಂಪನಿಯು ಕೈಗೊಂಡಿರುವ ಮುನ್ನೆಚ್ಚರಿಕೆ ಕ್ರಮಗಳೇನು; | ಹಟ್ಟಿ ಚಿನ್ನದ ಗಣಿ ಕಂಪನಿಯು ಗಣಿ ಉದ್ದಿಮೆಯಾಗಿದ್ದು, ಭೂಕೆಳಮೈಯಿಂದ ಚಿನ್ನದ ಅದಿರನ್ನು ಹೊರತೆಗೆದು ಭೂಮೇಲ್ಮೈಯಲ್ಲಿ ಸಂಸ್ಕರಿಸಲಾಗುತ್ತದೆ. ಚಿನ್ನದ ಅದಿರನ್ನು ಸಂಸ್ಕರಿಸಿ, ಉಳಿದ ಅದಿರಿನ ತ್ಯಾಜ್ಯದಲ್ಲಿರುವ ರಾಸಾಯನಿಕಗಳನ್ನು ನಿಷ್ಕ್ರೀಯಗೊಳಿಸಿದ (Detoxified/ Neutralise) ನಂತರ ಪೈಪಲೈನ್ ಮುಖಾಂತರ ನಿಗದಿಪಡಿಸಿದ Tailing Dump ದಲ್ಲಿ ಶೇಖರಿಸಲಾಗುತ್ತದೆ. ಟೇಲಿಂಗ್ ಡಂಪ್ ಮೇಲೆ ಸರ್ಕಾರದ IBM (Indian Bureau Of Mines) ಮತ್ತು KSPCB (Karnataka State pollution Control Board) ನಿರ್ದೇಶನದಂತೆ ಹಾಗೂ ಟೇಲಿಂಗ್ ಡಂಪಿನ್ ಮೇಲೆ ತೆಂಗಿನ ನಾರಿನ ಚಾಪೆಯನ್ನು (Coir Matt) ಹಾಕಿ ಜೊತೆಗೆ ವಿವಿಧ ಬಗೆಯ ಸಸಿಗಳನ್ನು ನೆಟ್ಟು, ಪೋಷಿಸಿ ಟೇಲಿಂಗ್ ಡಂಪ್‌ನಿಂದ ಗಾಳಿಯಲ್ಲಿ ಧೂಳಿನ ಕಣಗಳು ಹರಡದಂತೆ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಲಾಗಿದೆ.<br>ಮುಂದುವರೆದು, 2020-21 ರಿಂದ 2025-26 ಸಾಲಿನ ರವರೆಗೆ ಕಂಪನಿಯ ವೆಚ್ಚದಲ್ಲಿ ಗಣಿ ಪ್ರದೇಶದ ಸುತ್ತ-ಮುತ್ತ ಪ್ರದೇಶದಲ್ಲಿ ಅರಣ್ಯ ಇಲಾಖೆಯ ಸಹಯೋಗದಲ್ಲಿ 75,000 ವಿವಿಧ ಬಗೆಯ ಸಸಿಗಳನ್ನು ನೆಟ್ಟು, ಪೋಷಿಸುವ ಯೋಜನೆಯನ್ನು ಜಾರಿಗೊಳಿಸಲಾಗಿರುತ್ತದೆ.<br>ಕಂಪನಿಯು ಕಾರ್ಮಿಕರ ಆರೋಗ್ಯದ ರಕ್ಷಣೆ ಸಲುವಾಗಿ ಸುಸಜ್ಜಿತ 120 ಬೆಡ್‌ಗಳ ಆಸ್ಪತ್ರೆಯ ಸೌಲಭ್ಯವನ್ನು ಹೊಂದಿದೆ. ಚಿನ್ನದ ಗಣಿ ನೌಕರರ ಹಾಗೂ ಅವರ ಅವಲಂಬಿತರಿಗೆ ಉಚಿತವಾಗಿ ವೈದ್ಯಕೀಯ ಚಿಕಿತ್ಸೆಯನ್ನು ನೀಡಲಾಗುತ್ತಿದೆ. ಹೆಚ್ಚಿನ ಚಿಕಿತ್ಸೆ ಅವಶ್ಯಕತೆ ಇದ್ದಲ್ಲಿ, ಮಲ್ಟಿಸ್ಪೇಷಲಾಟಿ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗಾಗಿ ಶಿಫಾರಸ್ಸು ಮಾಡಿ ಕಳುಹಿಸಿ ಕೊಡುವ ಸೌಲಭ್ಯ ವ್ಯವಸ್ಥೆ ಇರುತ್ತದೆ. |
| (ಈ) | ಕಳೆದ ಮೂರು ವರ್ಷಗಳಲ್ಲಿ ಹಟ್ಟಿ ಚಿನ್ನದ ಗಣಿ ಕಂಪನಿಯ ಲಾಭಾಂಶದಲ್ಲಿ ಸ್ಥಳೀಯ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ (CSR Funds) ವ್ಯಯಿಸಲಾದ ಮೊತ್ತವೆಷ್ಟು? | ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತವು ಕಂಪನಿ ಕಾಯ್ದೆ-2013ರ **Schedule VII** ರಲ್ಲಿನ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಆರೋಗ್ಯ, ಶಿಕ್ಷಣ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ **CSR** ಹಣವನ್ನು ಸರ್ಕಾರ ಸಂಸ್ಥೆಗಳಿಗೆ ಶೇ.75% ಹಾಗೂ ಖಾಸಗಿ ಸಂಸ್ಥೆಗಳಿಗೆ ಶೇ.25%ರಂತೆ ಹಾಗೂ ಸ್ಥಳೀಯ ರಾಯಚೂರು ಜಿಲ್ಲೆಗೆ ಶೇ.75 ರಷ್ಟು ಮತ್ತು ಶೇ.25 ರಷ್ಟು ಮೊತ್ತವನ್ನು ರಾಜ್ಯದ ಇತರೆ ಭಾಗಗಳಿಗೆ CSR ಸಮಿತಿಯ ಅನುಮೋದನೆ ಪಡೆದು ನಿಯಮಾನುಸಾರ ಬಿಡುಗಡೆ ಮಾಡಲಾಗುತ್ತದೆ. |

